


# ನೀ ನನಗಾದರೆ ನಾ ನಿನಗೆ

ಮಲ್ಲಿಗೆಪುರ ಎಂಬುದೊಂದು ಹಳ್ಳಿ. ಅಲ್ಲಿ ತುಂಬಾ ಮನೆಗಳಿದ್ದವು. ಅಲ್ಲಿ ಚೆಲುವಯ್ಯ ಮತ್ತು ಒಲವಯ್ಯ ಎಂಬ ಇಬ್ಬರು ರೈತರು ಅಕ್ಕಪಕ್ಕದಲ್ಲೇ ವಾಸ ಮಾಡಿಕೊಂಡಿದ್ದರು. ಅಕ್ಕಪಕ್ಕದ ಮನೆಯವರು ಎಂದ ಮೇಲೆ ಏನಾದರೂ ವಸ್ತುಗಳು ಬೇಕಾದರೆ ತಮ್ಮ ಬಳಿ ಇದ್ದಿದ್ದನ್ನು ಅವರಿಗೆ ಅವರ ಬಳಿ ಇದ್ದಿದ್ದು ತಮಗೆ ಕೊಟ್ಟುತೆಗೆದುಕೊಳ್ಳುವುದರ ಮೂಲಕ ಪರಸ್ಪರ ಸಹಾಯ ಸಹಕಾರದಿಂದ ಇರಬೇಕು. ಕಷ್ಟ ಸುಖ ಹಂಚಿಕೊಳ್ಳಬೇಕು. ಹೀಗೆ ಪ್ರೀತಿ ವಿಶ್ವಾಸದಿಂದ ಇದ್ದರೆ ಮಾತ್ರ ಎಲ್ಲರೂ ಖುಷಿಯಾಗಿರಬಹದು ಅಲ್ವಾ ಮಕ್ಕಳೇ..? ಇಲ್ಲಿ ಚೆಲುವಯ್ಯ ಎಲ್ಲಾ ವ್ಯವಹಾರದಲ್ಲೂ ಲೆಕ್ಕಾಚಾರದ ಮನುಷ್ಯನಾಗಿದ್ದ. ಒಲವಯ್ಯನೋ ಸ್ವಲ್ಪ ಉದಾರ ಬುದ್ಧಿಯುಳ್ಳವನು. ಒಲವಯ್ಯನ ಈ ಗುಣವನ್ನು ಚೆಲುವಯ್ಯ ಚೆನ್ನಾಗಿ ತಿಳಿದುಕೊಂಡಿದ್ದ. ಇವನು ಗುದ್ದಲಿ, ಹಾರೆ, ಕುಡಗೋಲು, ಪಿಕಾಸಿಯಂತಹ ತೋಟ ಗದ್ದೆಗಳಲ್ಲಿ ಕೆಲಸಕ್ಕೆ ಬಳಸುವ ಸಾಮಾನುಗಳನ್ನೆಲ್ಲ ಮನೆಯಲ್ಲೇ ಇಟ್ಟುಕೊಂಡು ಒಲವಯ್ಯನ ಮನೆಗೆ ಬಂದು ‘ ನನ್ನ ಮನೆಯ ಗುದ್ದಲಿ ಹಾಳಾಗಿದೆ ಎಂದೋ ಅಥವಾ ಕುಡಗೋಲು ಹಾಳಾಗಿದೆ ಎಂದೋ ಸುಳ್ಳು ಹೇಳಿ ತೆಗೆದುಕೊಂಡು ಹೋಗುತ್ತಿದ್ದ. ಯಾವಾಗಲಾದರೂ ಒಮ್ಮೊಮ್ಮೆ ಮಾತ್ರ ಅದನ್ನು ತೆಗೆದು ಬಳಸಿ ಆಮೇಲೆ ಚೆನ್ನಾಗಿ ತೊಳೆದು ಪುನಃ ಇಟ್ಟುಬಿಡುತ್ತಿದ್ದ. ಇದರಿಂದ ಅವನ ಮನೆಯ ಸಾಮಾನುಗಳೆಲ್ಲ ಇನ್ನೂ ಹೊಸದಾಗೇ ಇರುತ್ತಿದ್ದವು ಮತ್ತು ತುಂಬಾ ವರ್ಷ ಬಾಳಿಕೆಗೆ ಬರುತ್ತಿದ್ದವು. ಪಾಪ ಒಲವಯ್ಯನಿಗೆ ಚೆಲುವಯ್ಯನ ಈ ಬುದ್ಧಿ ತಿಳಿಯದು ಅವನು